# ಘಟ್ಟದಲ್ಲಿ ಹೊಸ ಕವಲು!

ಪಶ್ಚಿಮ ಘಟ್ಟ ಪರಿಸರದಲ್ಲಿ ಶೇ 37ರಷ್ಟು ಭಾಗ ಮಾತ್ರ 'ಜೈವಿಕ ಸೂಕ್ಷ್ಮ ವಲಯ' ಎಂದು ಕೆ.ಕಸ್ತೂರಿರಂಗನ್ ನೇತೃತ್ವದ ಸಮಿತಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಇಡೀ ಪಶ್ಚಿಮ ಘಟ್ಟ ಪ್ರದೇಶವನ್ನು ಜೈವಿಕ ಸೂಕ್ಷ್ಮ ವಲಯ ಎಂದು ಪರಿಗಣಿಸಬೇಕು ಎನ್ನುವ ಮಾಧವ ಗಾಡ್ಗೀಳ್ ಸಮಿತಿ ವರದಿಗೆ ತೀರಾ ವ್ಯತಿರಿಕ್ತ ನಿಲುವು ಇದಾಗಿದೆ. ಇದರೊಂದಿಗೆ ಘಟ್ಟ ಪ್ರದೇಶದಲ್ಲಿ ಜೈವಿಕ ಸೂಕ್ಷ್ಮ ವಲಯವನ್ನು ಗುರ್ತಿಸುವ ಹಾಗೂ ಅಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವ ಪ್ರಕ್ರಿಯೆ ಕುರಿತ ಚರ್ಚೆಗೆ ಮತ್ತೆ ಚಾಲನೆ ದೊರೆತಿದೆ.

ಪಶ್ಚಿಮ ಘಟ್ಟದ ಒಟ್ಟು 1.64 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ 60 ಸಾವಿರ ಚ.ಕಿ.ಮೀ. ಪ್ರದೇಶವಷ್ಟೇ (ಶೇ 37) ಜೈವಿಕ ಸೂಕ್ಷ್ಮ ವಲಯ. ಕರ್ನಾಟಕ, ಗೋವಾ, ಗುಜರಾತ್, ಮಹಾರಾಷ್ಟ್ರ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಬ್ಬಿಕೊಂಡಿರುವ ಈ ಪರಿಸರದಲ್ಲಿ ಗಣಿಗಾರಿಕೆ, ಮರಳು ತೆಗೆಯುವುದು, ಕ್ವಾರಿ ಮುಂತಾದ ಚಟುವಟಿಕೆಗಳಿಗೆ ಸಂಪೂರ್ಣ ನಿರ್ಬಂಧ ಹೇರಬೇಕು. ಜಲ ವಿದ್ಯುತ್ ಯೋಜನೆಗಳಿಗೂ ಈ ಪ್ರದೇಶದಲ್ಲಿ ಅವಕಾಶ ನೀಡಕೂಡದು ಎನ್ನುವುದು ಹೊಸ ವರದಿಯ ಸಾರಾಂಶ. ಆದರೆ, ಪಶ್ಚಿಮ ಘಟ್ಟದ ಸುಮಾರು ಶೇ 60ರಷ್ಟು ಭಾಗವನ್ನು ಸಾಂಸ್ಕೃತಿಕ ಭೂಪ್ರದೇಶ ಎಂದು ವರದಿ ಗುರ್ತಿಸಿದೆ. ಜನವಸತಿ, ಕೃಷಿ ಮತ್ತು ನೆಡುತೋಪುಗಳು ವ್ಯಾಪಕವಾಗಿರುವ ಈ ಪರಿಸರದಲ್ಲಿ ಯಾವುದೇ ರೀತಿಯ ನಿಯಂತ್ರಣಕ್ಕೆ ಸಮಿತಿ ಶಿಫಾರಸು ಮಾಡಿಲ್ಲ.

ಪಶ್ಚಿಮ ಘಟ್ಟಗಳ ಸಂರಕ್ಷಣೆಯೆಂದರೆ ಆರ್ಥಿಕ ಅವಕಾಶಗಳನ್ನು ಸಂಪೂರ್ಣವಾಗಿ ಪ್ರತಿಬಂಧಿಸುವುದಲ್ಲ. ಸಮತೋಲಿತ ಹಾಗೂ ಪರಿಸರಸ್ನೇಹಿ ಚಟುವಟಿಕೆಗಳಿಂದಾಗಿ ಸ್ಥಳೀಯರ ಬದುಕು ಮತ್ತು ಆರ್ಥಿಕ ಮಟ್ಟದಲ್ಲಿ ಸುಧಾರಣೆ ಉಂಟಾಗುವ ಆಶಯವನ್ನು ವರದಿ ವ್ಯಕ್ತಪಡಿಸಿದೆ.

ಕಸ್ತೂರಿರಂಗನ್ ಅಧ್ಯಕ್ಷತೆಯ ವರದಿಯನ್ನು ಜಾರಿಗೆ ತರುವುದಾದರೆ, ಪಶ್ಚಿಮ ಘಟ್ಟ ಪ್ರದೇಶದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಅವಕಾಶ ದೊರೆಯುತ್ತದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅವಕಾಶ ದೊರೆಯುತ್ತದೆ. ಮೇಲ್ನೋಟಕ್ಕೆ ಇದೆಲ್ಲವೂ ಆಕರ್ಷಕವಾಗಿಯೇ ಕಾಣಿಸುತ್ತದೆ. ಆದರೆ, ವರದಿ ಸೂಚಿಸುವ ಪರಿಸರಸ್ನೇಹಿ ಪರಿಕಲ್ಪನೆಗೆ ಮಾನದಂಡವಾದರೂ ಯಾವುದು? ರಸ್ತೆ, ಎಸ್ಟೇಟ್, ರೆಸಾರ್ಟ್‌ಗಳ ರೂಪದಲ್ಲಿ ಕಾಡಿಗೆ ಪ್ರವೇಶಿಸುವ ನಾಗರಿಕತೆಗೆ ನಿಯಂತ್ರಣ ಹೇರುವುದು ಹೇಗೆ? ಮೋಟುಗೋಡೆ ಮೇಲಿನ ದೀಪದ ಬೆಳಕಿನಂತೆ ಕಸ್ತೂರಿರಂಗನ್ ವರದಿ ಇನ್ನಷ್ಟು ಗೊಂದಲಗಳನ್ನು ಹುಟ್ಟುಹಾಕಿದೆ.

ಮಾಧವ ಗಾಡ್ಗೀಳರು ಪಶ್ಚಿಮ ಘಟ್ಟಗಳ ಬಗ್ಗೆ ಆಳ ಜ್ಞಾನ ಉಳ್ಳವರು. ಅವರ ನೇತೃತ್ವದ ವರದಿಗೆ ತೀರಾ ವ್ಯತಿರಿಕ್ತ ರೀತಿಯಲ್ಲಿ ಇರುವುದು ಕೂಡ ಹೊಸ ವರದಿ ಪ್ರಾಂಜಲವಾಗಿದೆ ಎಂದು ಹೇಳುವುದಕ್ಕೆ ಕಷ್ಟವಾಗುವಂತಿದೆ. ಪಶ್ಚಿಮ ಘಟ್ಟ ಪರಿಸರವನ್ನು ಸಮಗ್ರ ರೀತಿಯಲ್ಲಿ ಸಂರಕ್ಷಿಸುವ ಕುರಿತಂತೆ ಗಾಡ್ಗೀಳ್ ವರದಿಯಲ್ಲಿ ಸ್ಪಷ್ಟ ನೀತಿ ಇರಲಿಲ್ಲ ಎನ್ನುವುದು ನಿಜ. ಆದರೆ, ಇಡೀ ಘಟ್ಟ ಪ್ರದೇಶವನ್ನು ಸೂಕ್ಷ್ಮ ಜೈವಿಕ ವಲಯ ಎಂದು ಪರಿಗಣಿಸುವ ಬಗ್ಗೆ ಹಳೆಯ ವರದಿ ಸ್ಪಷ್ಟ ನಿಲುವು ತಾಳಿತ್ತು. ಇದಕ್ಕೆ ತದ್ವಿರುದ್ಧ ನಿಲುವನ್ನು ಕಸ್ತೂರಿರಂಗನ್ ವರದಿ ಹೊಂದಿದೆ. ಆದರೆ, ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಹೊಸ ವರದಿಯಲ್ಲೂ ಅಸ್ಪಷ್ಟತೆ ಇದೆ.

ಕಾಡು ಬೇಕು, ಹುಲಿ ಉಳಿಯಬೇಕು ಎನ್ನುವ ಅಪೇಕ್ಷೆಗಳ ಹಿಂದೆ ಮನುಷ್ಯನ ಹಿತಾಸಕ್ತಿಯೇ ಅಡಗಿದೆ. ಈ ಹಿನ್ನೆಲೆಯಲ್ಲಿ ಹೊಸ ವರದಿ ಪ್ರತಿಪಾದಿಸಿರುವ ಅಭಿವೃದ್ಧಿ ಚಟುವಟಿಕೆಗಳ ಪರಿಕಲ್ಪನೆಯನ್ನು ಮನುಷ್ಯ ಕೇಂದ್ರಿತ ಎಂದು ಭಾವಿಸುವುದು ಕಷ್ಟ. ಮೇಲ್ನೋಟಕ್ಕೆ ಅದು ಉದ್ಯಮ ಕೇಂದ್ರಿತ ಆಗಿರುವಂತೆ ಕಾಣಿಸುತ್ತದೆ. 'ಸಾಂಸ್ಕೃತಿಕ ಭೂಪ್ರದೇಶ' ಎಂದು ಗುರ್ತಿಸಬಹುದಾದ ಪಶ್ಚಿಮ ಘಟ್ಟದ ಶೇ 60ರಷ್ಟು ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಸಾಧು ಎನ್ನುವುದಾದರೆ, ಈ ಅಂಚಿನ ಪ್ರದೇಶ ಉಳಿದ ಸೂಕ್ಷ್ಮ ವಲಯವನ್ನು ನಿಧಾನವಾಗಿ ಪ್ರವೇಶಿಸುವುದಿಲ್ಲ ಎಂದು ಹೇಗೆ ಭಾವಿಸುವುದು?

ಪಶ್ಚಿಮ ಘಟ್ಟ ಪ್ರದೇಶ ದೇಶದ ಅತಿ ಸೂಕ್ಷ್ಮ ಜೈವಿಕ ವಲಯ ಮಾತ್ರವಲ್ಲ, ಅದು ದೇಶದ ಸಂಪತ್ತು ಹಾಗೂ ಹೆಮ್ಮೆ ಕೂಡ. ಅದರ ಬಗೆಗಿನ ಯಾವುದೇ ನಿರ್ಧಾರಗಳನ್ನು ಅನುಮಾನದ ಕಣ್ಣಿನಲ್ಲೇ ಮತ್ತೆ ಮತ್ತೆ ಪರಿಶೀಲಿಸಬೇಕಿದೆ. ಕಸ್ತೂರಿ ರಂಗನ್ ವರದಿ ಬಗ್ಗೆ ಕೂಡ ವ್ಯಾಪಕ ಚರ್ಚೆ ನಡೆಯಬೇಕಾಗಿದೆ ಹಾಗೂ ಈ ಚರ್ಚೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡ ಮುಕ್ತ ಮನಸ್ಸಿನಿಂದ ಭಾಗವಹಿಸಬೇಕಿದೆ.

■ **ರಘುನಾಥ ಚ.ಹ.**

**ಕಾಡು ಬೇಕು, ಹುಲಿ ಉಳಿಯಬೇಕು ಎನ್ನುವ ಅಪೇಕ್ಷೆಗಳ ಹಿಂದೆ ಮನುಷ್ಯನ ಹಿತಾಸಕ್ತಿಯೇ ಅಡಗಿದೆ. ಈ ಹಿನ್ನೆಲೆಯಲ್ಲಿ ಹೊಸ ವರದಿ ಪ್ರತಿಪಾದಿಸಿರುವ ಅಭಿವೃದ್ಧಿ ಚಟುವಟಿಕೆಗಳ ಪರಿಕಲ್ಪನೆಯನ್ನು ಮನುಷ್ಯ ಕೇಂದ್ರಿತ ಎಂದು ಭಾವಿಸುವುದು ಕಷ್ಟ. ಮೇಲ್ನೋಟಕ್ಕೆ ಅದು ಉದ್ಯಮ ಕೇಂದ್ರಿತ ಆಗಿರುವಂತೆ ಕಾಣಿಸುತ್ತದೆ.**



ಈಶ್ವರ್